ಪ್ರಭುಗಳು, 'ಹೌದಲ್ಲ, ಇಂದು ಅದೇ ಬಲುಗಳ್ಳನು ಭಕ್ತನಾಗಿ ದೇವಮಂದಿರದ ಪ್ರಾಂಗಣಕ್ಕೆ ಕಲ್ಲು ಹೊರುವ ಪವಿತ್ರ ಕಾಯಕ ಮಾಡುತ್ತಿರುವನಲ್ಲಾ' ಅಂದರು.

ಮಂತ್ರಿಗಳು, 'ಮಹಾಸ್ವಾಮಿ ಅದಲ್ಲಾ, ಈಗ ಅವನು ನಡೆಸುತ್ತಿರುವ ಕಾರ್ಯ ಕ್ಷುಲ್ಲಕವೆನ್ನಿ' ಅಂದರು.

'ಮತ್ತೇನು ನುಡಿಯಲಿದ್ದೀರಿ ಅಮಾತ್ಯರೇ.'

'ಒಂದಲ್ಲಾ ಒಂದು ದಿನ ಧರ್ಮಗುರುಗಳು ಅರಮನೆಯ ವಿರುದ್ಧ ಏನಾದರೂ ಪಿತೂರಿ, ಸಂಚು, ದಂಗೆ ಹೂಡಿದರೆ ಈ ಕಳ್ಳನೇ ನಮ್ಮ ಬಲವಾದ ಆಯುಧವಾಗಬಹುದಲ್ಲ. ಜತೆಗೆ ಪಾತಕ ಕೂಡ! ಇವನನ್ನು ಅರಮನೆಯ ಆಳುವೇರಿಯ ನೆತ್ತಿಯಲ್ಲಿ ನಿಲ್ಲಿಸಿ, ಧರ್ಮದ ನಿಶಾಭೋಗ ಸಂಗತಿಯನ್ನು ಲೋಕಕ್ಕೆ ಡಂಗುರ ಹೊಡೆಸಬಹುದಲ್ಲ.'

ಜಿತಸೇನ ಪ್ರಭುಗಳು ಅಮಾತ್ಯರ ಉಪಾಯಕ್ಕೆ ತಲೆದೂಗುತ್ತ, 'ಓಹ್, ನಾನು ನಿಮ್ಮನ್ನು ಮಂತ್ರಿಮಂಡಲ ಸಮೂಹದಲ್ಲಿಯೇ ಸರ್ವಶ್ರೇಷ್ಠರೆಂದು ಪರಿಗಣಿಸಿರುವುದು ಯಾಕೆಂದು ನಿಮಗೆ ಈ ಮುಹೂರ್ತದಲ್ಲಾದರೂ ತಿಳಿಯಿತೇ' ಅಂದರು. ಹೀಗೆ ಪರಸ್ಪರ ಶ್ಲಾಘನೆಯಲ್ಲಿ ಪ್ರಭುಗಳೂ, ಮಂತ್ರಿಗಳೂ ಕುದುರೆ ಸವಾರಿಯಲ್ಲಿ ಇನ್ನಷ್ಟು ದೂರ ಸಾಗುವಲ್ಲಿ, ಅಲ್ಲೆಲ್ಲ ಸೆರೆಮನೆಯಿಂದ ಹೊರಬಿದ್ದವರೆಲ್ಲರೂ ಅಳುತ್ತ, ನಗುತ್ತ, ಹುಚ್ಚು ಹಿಡಿದವರಂತೆ ಕುಣಿಯುತ್ತ ತಂತಮ್ಮ ದುಡಿಮೆಯಲ್ಲಿ ತೊಡಗಿದ್ದರು.

★★★

ಪ್ರಭುಗಳು ಮುಂದೆ ಮುಂದೆ ಸಾವಧಾನದಲ್ಲಿ ಸಾಗಲು, ಅಲ್ಲೊಬ್ಬ ಮುದುಕನು ಮಣ್ಣು ಹೊರುತ್ತಿದ್ದ ಮಕ್ಕರಿಯನ್ನು ತುಯ್ದು ಅತ್ತತ್ತಲೇ ಬಿಸಾಡಿ ಅಲ್ಲೇ ಇದ್ದ ಬೇವಿನ ಮರದ ಬುಡಕ್ಕೆ ಹೋಗಿ ಕೂತ. ಅವನಿಗೆ ಸಿಟ್ಟು ಏರಿದಂತಿತ್ತು. ಆದರೆ, ಯಾರ ಮೇಲೆ ಎಂಬುದು ಅವನಿಗೇ ಗೊತ್ತಿರಲಿಲ್ಲ. ಸೆರೆಯಾಳು ಮುಖಂಡನು ಹಾಗೆ ಹೋದವನನ್ನು ಅತ್ತಲೇ ಬಿಟ್ಟು ಉಳಿದವರಿಗೆ, 'ಹ್ಞೂ ಬೇಗ ಬೇಗ ಕಾರ್ಯ ಸಾಗಲಿ, ಮುಂದಿನ ವಾರವೇ ದೇವ ಮಂದಿರದ ದ್ವಾರ ತೆರೆಸುವ ಮಹಾಕಾರ್ಯ ನೆರವೇರಲಿದೆ. ನಿಮಗೆಲ್ಲ ಇದೇ ಪ್ರಾಂಗಣದಲ್ಲಿ ವಿದಿಶಾನಗರದ ಶ್ರೀಮಂತರು ಬಾಯಿ ತುಂಬ ಭೋಜನಗೈಸಲಿರುವರು. ಮುಹೂರ್ತದ ದಿನ ಬಂದೇ ಬಂತು' ಎನ್ನುತ್ತಿದ್ದ.

ಮಹಾರಾಜರು ತಾವು ಹಾಕಿದ್ದ ಮುಖಗವುಸನ್ನು ಮತ್ತಷ್ಟು ಬಿಗಿ ಮಾಡಿಕೊಂಡು ಆ ಸೆರೆಯಾಳು ಮುಖಂಡನಲ್ಲಿ ಬಂದರು. ಕೊಂಚ ಕೆಳದನಿಯಲ್ಲಿ, 'ಅಯ್ಯಾ ಈ ದೇವಮಂದಿರ ಸಂಬಂಧ ನೀನು ಕೈಗೊಂಡಿರುವ ಕಾರ್ಯ ಶ್ಲಾಘನೀಯ. ಈ ಕಾರ್ಯಗತಿಯನ್ನು ಪರಿಶೀಲಿಸಲು ರಾಜಪ್ರಭುಗಳು ನಮ್ಮೀರ್ವರನ್ನು ಇತ್ತ ಕಳಿಸಿರುವರು. ಇದೀಗ ಮಾಡುವ ಕೆಲಸ ಬಿಟ್ಟು ಕಳ್ಳದಾರಿ ಹಿಡಿದು ಹೋದ ಆ ಮುದುಕ ದೈವಕಾರ್ಯವನ್ನು ತಿರಸ್ಕರಿಸಿದಂತಿದೆಯಲ್ಲ' ಎಂದರು. ಅದಕ್ಕೆ ಮುಖಂಡನು ಹೇಳಿದ ಮುದುಕನ ಕತೆಯೆಂದರೆ–

'ರಾಜ ಪರಿವಾರಿಗಳೇ ಇವನೊಬ್ಬ ವಿದಿಶಾ ನಗರದ ಆಚೆಯಿದ್ದ ಗ್ರಾಮದಲ್ಲಿ ವಸ್ತ್ರ ಶುದ್ಧಿ ಮಾಡುತ್ತಿದ್ದ ಮಡಿವಾಳಿ. ಆ ಊರಗೌಡನು ಒಂದು ದಿನ ರಾತ್ರಿ ತನ್ನ ಉಪಪತ್ನಿಯ ಗೃಹದಿಂದ ಎದ್ದು ಮುಂಜಾನೆ ಸ್ವಗೃಹದತ್ತ ಬರಲು ಅತ್ತ ಗೌಡತಿಯು ಮೊಸರು ಕಡೆಯುತ್ತಿದ್ದವಳು, 'ರಾತ್ರಿ ಅದೆಲ್ಲಿಗೆ ಏನು ಕಡಿಯಲಿಕ್ಕೆ ಹೋಗಿದ್ದೆ' ಅಂದು ಬಲುಸಿಟ್ಟಿನಿಂದ ಕೇಳಿದಳಂತೆ. ಗೌಡಿಕೆಯ ಗತ್ತಿನ ಗಂಡ, 'ಲೇ ಬಡ್ಡೀ, ರಾತ್ರಿಯೆಲ್ಲ ಹೊಲಗದ್ದೆ ಕಾಯಬೇಕಲ್ಲ, ಅದೆಲ್ಲ ನಿನ್ನ ಮಿಂಡ ಮಾಡುವನೇ' ಅಂದ. ಆಳುಗಳಿಂದ ಸತ್ಯ ತಿಳಿದಿದ್ದ ಗೌಡತಿ, 'ಇನ್ನೊಬ್ಬಳ ಮಗ್ಗುಲಿಂದ ಎದ್ದು ಬಂದ ನೀನು ನನಗೆ ಇಲ್ಲದ ಮಿಂಡನನ್ನು ತಂದು ತಳುಕು ಹಾಕುತ್ತಿರುವೆಯಾ, ನಿಚ್ಚವೂ ಅವಳ ಬಾಯಿಗೆ ಎಷ್ಟು ತುಪ್ಪ